ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: GD

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 27/5/2020

# ಅಖಾಡಕ್ಕೆ ಜಿಗಿದ ಮೋದಿ

ಉವಾ 27/5/20

## ಗಡಿಯಲ್ಲಿ ಚೀನಾ ಕಿತಾಪತಿ । ಪ್ರಧಾನಿ ಮಹತ್ವದ ರಕ್ಷಣಾ ಸಭೆ

**ನವದೆಹಲಿ:** ಮಂಗಳವಾರ ಇಡೀ ದಿನ ದೆಹಲಿಯಲ್ಲಿ ಲಡಾಖ್ ನದ್ದೇ ಟೆನ್ಷನ್... ಸಭೆಯ ಮೇಲೆ ಸಭೆ... ಚೀನಾದ ಕಿತಾಪತಿ ನಡೆಯೇ ಚರ್ಚೆಗೆ ವಸ್ತು... ಲಡಾಖ್‌ನಿಂದ 200 ಕಿ.ಮೀ. ದೂರದ ಟಿಬೆಟ್ ನೆಲದಲ್ಲಿ ಚೀನಾ ಸೇನೆ ರಹಸ್ಯವಾಗಿ ನಿರ್ಮಿಸಿದ್ದ ವಾಯುನೆಲೆಯ ಚಿತ್ರಗಳು ಬಹಿರಂಗವಾಗುತ್ತಿದ್ದಂತೆ, ಪ್ರಧಾನಿ ನರೇಂದ್ರ ಮೋದಿ ಅಖಾಡಕ್ಕೆ ಧುಮುಕಿದ್ದಾರೆ.

ಲಡಾಖ್‌ನ ಸನಿಹಕ್ಕೆ ಬರುತ್ತಿರುವ ಚೀನಾ ಮಿಲಿಟರಿ ನಡೆ ಮತ್ತು ಲಡಾಖ್‌ನಲ್ಲಿ ನಿರ್ಮಿಸಲಾಗುತ್ತಿರುವ ರಸ್ತೆ ಕುರಿತ ವಿವಾದದ ಬಗ್ಗೆ ಚರ್ಚಿಸಲು ಪ್ರಧಾನಿ ಉನ್ನತ ಮಟ್ಟದ ತುರ್ತು ಸಭೆ ಕರೆದಿದ್ದರು. ಸೇನೆಯ ಮೂರೂ ದಳದ ಮುಖ್ಯಸ್ಥರು, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ರಕ್ಷಣಾ ಪಡೆಗಳ ಮುಖ್ಯಸ್ಥ ಜ.ಬಿಪಿನ್ ರಾವತ್, ಗಡಿಯಲ್ಲಿನ 2 ತಿಂಗಳಲ್ಲಾದ ಬೆಳವಣಿಗೆಯ ಕುರಿತು ಮೋದಿ ಅವರಿಗೆ ಸಮಗ್ರ ಮಾಹಿತಿ ಒಪ್ಪಿಸಿದ್ದಾರೆ. ಇದಕ್ಕೂ ಮುನ್ನ ವಿದೇಶಾಂಗ ಕಾರ್ಯದರ್ಶಿ ಜತೆ ಪ್ರಧಾನಿ ಚರ್ಚೆ ನಡೆಸಿದ್ದರು ಎನ್ನಲಾಗಿದೆ.

ಈ ಎಲ್ಲ ಬೆಳವಣಿಗೆಗೂ ಮುನ್ನ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸೇನೆಯ ಮೂರೂ ದಳದ ಮುಖ್ಯಸ್ಥರೊಂದಿಗೆ ಮಹತ್ವದ ಚರ್ಚೆ ನಡೆಸಿದ್ದರು. ಗಡಿಯಲ್ಲಿನ ಕಮಾಂಡರ್‌ಗಳ ಜೊತೆಗೂ ದೂರವಾಣಿ ಮೂಲಕ ಪರಿಸ್ಥಿತಿ ಕಲೆಹಾಕಿದ್ದರು.

**ವಾಯುನೆಲೆ ನಿರ್ಮಾಣ:** ಕಳೆದ ಒಂದೂವರೆ ತಿಂಗಳಿನಲ್ಲಿ ಟಿಬೆಟ್‌ನ ಅಂಚಿನಲ್ಲಿ ಚೀನಾ ಸದ್ದಿಲ್ಲದೆ ನಿರ್ಮಿಸಿದ್ದ ವಾಯುನೆಲೆಯ 2 ಚಿತ್ರಗಳನ್ನು 'ಡೆಟ್ರೆಸ್ಫಾ' ತನ್ನ ಟ್ವಿಟ್ಟರ್ ಖಾತೆಯಲ್ಲಿ ಮಂಗಳವಾರ ಹರಿಬಿಟ್ಟಿತ್ತು. ಏಪ್ರಿಲ್ 6 ಮತ್ತು ಮೇ 21ರ ನಡುವೆ, ಕೇವಲ ಒಂದೂವರೆ ತಿಂಗಳಿನಲ್ಲಿ ಚೀನಾ ಲಗುಬಗೆಯಲ್ಲಿ ಸುಸಜ್ಜಿತ ಯುದ್ಧವಿಮಾನ ನಿಲ್ದಾಣ ನಿರ್ಮಿಸಿರುವುದನ್ನು ಈ ಚಿತ್ರಗಳು ಸ್ಪಷ್ಟಪಡಿಸಿವೆ. ಟ್ಯಾಕ್ಸಿ ಟ್ರ್ಯಾಕ್ ಜೊತೆಗೆ ಹೆಲಿಕಾಪ್ಟರ್ ನಿಲ್ದಾಣಗಳೂ ಇದರಲ್ಲಿ ಗೋಚರಿಸಿವೆ.

ಇತ್ತ ಚೀನಾ ಸೈನಿಕರ ಸಂಖ್ಯೆಗೆ ಸಮವಾಗಿ ಭಾರತ ಕೂಡ ಅಷ್ಟೇ ಸಂಖ್ಯೆಯ ಸೈನಿಕರನ್ನು ಗಲ್ವಾನ್ ನದಿ ತೀರದಲ್ಲಿ ನಿಯೋಜಿಸಿದೆ. ಇತ್ತ ಗುಲ್ದಾಂಗ್ ವಲಯದಲ್ಲೂ ಚೀನಾ ಸೈನಿಕರು ದಿಢೀರ್ ಪ್ರತ್ಯಕ್ಷವಾಗಿದ್ದು, ಅಲ್ಲೂ ಭಾರತೀಯ ಸೈನಿಕರು ಹದ್ದಿನಗಣ್ಣು ನೆಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

### 24 ಗಂಟೇಲಿ ಆಗಿದ್ದೇನು?

- ಗಲ್ವಾನ್ ತೀರದಲ್ಲಿ ಚೀನಾ ಮತ್ತಷ್ಟು ಸೇನೆ ನಿಯೋಜನೆ
- ರಾಜನಾಥ್ ಸಿಂಗ್ ನೇತೃತ್ವದಲ್ಲಿ ಸಭೆ
- ಭಾರತ- ಚೀನಾ ಕಮಾಂಡರ್‌ಗಳ 4ನೇ ಸುತ್ತಿನ ಮಾತುಕತೆ ವಿಫಲ
- ವಿದೇಶಾಂಗ ಕಾರ್ಯದರ್ಶಿ ಜತೆ ಮೋದಿ ಚರ್ಚೆ
- ಚೀನಾ ವಾಯುನೆಲೆ ಸ್ಯಾಟ್‌ಲೈಟ್ ಚಿತ್ರ ವೈರಲ್
- ಸೇನಾ ಮುಖ್ಯಸ್ಥರ ಜತೆ ಪ್ರಧಾನಿ ತುರ್ತು ಸಭೆ

### ಮುರಿದು ಬಿದ್ದ ಮಾತುಕತೆ

ಉಭಯ ದೇಶಗಳ ಸೇನಾ ಕಮಾಂಡರ್‌ಗಳು ಕಳೆದ 2 ದಿನಗಳಿಂದ ನಡೆಸಿದ್ದ 4 ಸುತ್ತಿನ ಮಾತುಕತೆಗಳೂ ವಿಫಲವಾದ ಕಾರಣ, ಈ [illegible] ಹಂತಕ್ಕೆ ತಲುಪಿದೆ.

### ರಸ್ತೆ ನಿರ್ಮಾಣ ನಿಲ್ಲಿಸಲ್ಲ

ಲಡಾಖ್ ಪ್ರದೇಶದ ವಾಸ್ತವಿಕ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಭಾರತ ನಿರ್ಮಿಸುತ್ತಿರುವ ರಸ್ತೆ ಕಾಮಗಾರಿಯನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಖಡಕ್ ಆಗಿ ಹೇಳಿದ್ದಾರೆ. ಸೇನಾ ಮುಖ್ಯಸ್ಥರ ಜತೆಗೆ ಒಂದು ಗಂಟೆಗೂ ಹೆಚ್ಚು ಕಾಲ ನಡೆಸಿದ ಸಭೆಯಲ್ಲಿ ಈ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ. ರಾಜತಾಂತ್ರಿಕವಾಗಿ ಈ ಸಮಸ್ಯೆ ಬಗೆಹರಿದರೂ, ಭಾರತ ಗಲ್ವಾನ್ ಪಾತ್ರದ ಪ್ರದೇಶದಲ್ಲಿ ತನ್ನ ಹಕ್ಕುಗಳನ್ನು ಮುಂದುವರಿಸಬೇಕು ಎಂದು ಆದೇಶಿಸಿದ್ದಾರೆ.